ಅಲ್ಲಿ ಫೌಂಡೇಷನ್ ಹಾಕಿ, ಕಾನ್‌ಕ್ರೀಟ್ ಸಹ ಹಾಕಿದ್ದರು. ಅದಕ್ಕೆ ಸಿಮೆಂಟ್ ಸರಿಯಾಗಿ ಹಾಕದೇ ಇದ್ದುದ್ದರಿಂದ, ಹಣ ಸರಿಯಾದ ರೀತಿಯಲ್ಲಿ ಖರ್ಚು ಮಾಡಿ ಆ ಕೆಲಸವನ್ನು ಮಾಡದೇ ಇದ್ದರಿಂದ ಅದೆಲ್ಲಾ ಕೊಚ್ಚಿಕೊಂಡು ಹೋಯಿತು. ಈಗ ನದಿ ತನ್ನ ಪ್ರವಾಹದ ದಾರಿಯನ್ನೇ ಬದಲು ಮಾಡಿದೆ. ಈ ಬಗ್ಗೆ ಏನಾದರೂ ತನಿಖೆ ಮಾಡಿ ಇದಕ್ಕೆ ಯಾರು ಜವಾಬ್ದಾರರು ಎಂಬುದನ್ನು ಗೊತ್ತು ಮಾಡಿದ್ದೀರಾ? ಈ ತನಿಖೆ ಮಾಡಿಲ್ಲದಿದ್ದರೆ ಈಗಲಾದರೂ ತನಿಖೆ ಮಾಡಿ ಸಂಬಂಧಪಟ್ಟ ಇಂಜಿನಿಯರ್ ಮತ್ತು ಮುಖ್ಯಾಧಿಕಾರಿಗಳ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ವಿವರ ಸಧ್ಯಕ್ಕೆ ನನ್ನ ಹತ್ತಿರವಿಲ್ಲ. ಅದನ್ನು ತರಿಸಿ ನೋಡಿ ಅದಂ ಯಾವ ಹಂತದಲ್ಲಿದೆ ಎಂಬುದನ್ನು ನಾನಂ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಮಾನ್ಯ ಸದಸ್ಯರು ಅಲ್ಲಿ ಫೌಂಡೇಷನ್ ಆಗಿದೆ, ಕಾನ್‌ಕ್ರೀಟ್ ಆಗಿದೆ ಎಂದಂ ಹೇಳಿದ್ದಾರೆ. ಹಿಂದೆ ಹಾಕಿರತಕ್ಕಂಥ ಸಿಮೆಂಟ್, ಗಾರೆಯೆಲ್ಲಾ ವಾಷ್‌ಔಟ್ ಆಗಿದೆ ಎಂದಂ ಹೇಳಿದ್ದಾರೆ. ಹಿಂದೆ ಸಂಬಂಧಪಟ್ಟವರು ಅದನ್ನು ಯಾವರೀತಿಯಲ್ಲಿ ಕಟ್ಟಿದ್ದರೋ ಗೋತ್ತಿಲ್ಲ. ಈ ಬಗ್ಗೆ ನಾನು ಫೈಲ್ ತರಿಸಿ ನೋಡಿ. ಆ ರೀತಿ ಏನಾದರೂ ತಪ್ಪಾಗಿದ್ದರೆ ಸಂಬಂಧಪಟ್ಟವರ ಮೇಲೆ ಸೂಕ್ತ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ.

Au iting of Housfng Co—operative Society Mandya

811 SRI M. S. ATMANANDA (Mandya).—Will the Minister for Co-operation be pleased to state.—

(a) whether the accounts of Housing Co-operative Society of Mandya Town has been audited ;

(b) whether it has come to the notice of the Government that the amount has been misappropriated in the said Societ y;

(c) if so. the names of persons who are responsible for this?

SRI H. C. SRIKANTAIAH (Minister for Co-operation).—

(a) Yes,

(b) Yes.

(c) Sri H. N. Vaidyanath, Ex-Secretary and Sri K. G. Nagarajaiah, Ex-Hon. Treasurer of this Society were responsible for this.

ಶ್ರೀ ಎಂ. ಎಸ್. ಆತ್ಮಾನಂದ.—ಮಂಡ್ಯ ನಗರದ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಎಷ್ಟು ಹಣ ದುರುಪಯೋಗವಾಗಿದೆ ? ಆಗ ಆಡಳಿತ ಮಂಡಳಿ ಇರಲಿಲ್ಲವೆ ? ಮಾಜಿ ಕಾರ್ಯದರ್ಶಿಯಾದ ವೈದ್ಯನಾಥ ಮತ್ತು ಮಾಜಿ ಖಜಾಂಚಿಯಾದ ನಾಗರಾಜಯ್ಯ ಅವರ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—೧೯೭೫-೭೬ರಲ್ಲಿ ರೂ.೨೫೦-೨೨ ಪೈಸೆ ೧೯೭೬-೭೭ ರಲ್ಲಿ ೨,೦೦,೭೦೬-೫೩ ಪೈಸೆ, ೧೯೭೭-೭೮ ರಲ್ಲಿ ೯೪,೪೫೬-೨೫ ಪೈಸೆ ಹಣ ದುರುಪಯೋಗವಾಗಿದೆ. ಒಟ್ಟು ೩,೭೬,೪೦೫-೫೩ ಪೈಸೆ ದುರುಪಯೋಗವಾಗಿದೆ. ಮಾಜಿ ಕಾರ್ಯದರ್ಶಿಯಾದ ಹೆಚ್. ಎನ್. ವೈದ್ಯನಾಥ ಮತ್ತು ಮಾಜಿ ಖಜಾಂಚಿಯಾದ ಕೆ. ಜಿ, ನಾಗರಾಜಯ್ಯ ಇವರೇ ಜವಾಬ್ದಾರರು ಎಂದು ಈಗಾಗಲೇ ತೀರ್ಮಾನವಾಗಿದೆ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಕೋರ್ಟ್‌ನಲ್ಲಿ ಅಪೀಲು ಹಾಕಿಕೊಂಡಿದ್ದಾರೆ. ಕೇಸ್ ಡಿಸ್‌ಪೋಸಲ್ ಆದ ಮೇಲೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗಂ

ತ್ತದೆ. ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಲು ಸಿ.ಒ.ಡಿ. ಯವರಿಗೆ ಒಪ್ಪಿಸಿ ಈಗಾಗಲೇ ಕ್ರಮ ಜರುಗಿಸಲಾಗಿದೆ.

SRI K. BHASKAR NAIDU.—Sir, I want to have a cup of coffee. There is no coffee in the canteen. Is it a canteen for us or is it for somebody else to make business ?

MR. DPEUTY SPEAKER.—Certainly it is for legislators.

SRI K. BHASKAR NAIDU.—There is no coffee there.

MR. DEPUTY SPEAKER.—I will take action. Hon. Member Sri Ram Bhat, please put your supplementary

ಶ್ರೀ ಕೆ. ರಾಮಭಟ್.—ಚುನಾವಣೆಗಳನ್ನು ಮುಂದಕ್ಕೆ ಹಾಕುವುದರಿಂದ ಈ ರೀತಿಯಾಗುತ್ತಿದೆ. ಚುನಾವಣೆಗಳನ್ನು ಮುಂದಕ್ಕೆ ಹಾಕುವುದು ಈ ವರ್ಷ ಕೊನೆಯಾಗುತ್ತದೆಯೇ ? ಚುನಾವಣೆಗಳನ್ನು ಮುಂದಕ್ಕೆ ಹಾಕುವುದರಿಂದ ಈ ರೀತಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ .—ಚುನಾವಣೆಗಳನ್ನು ಮುಂದಕ್ಕೆ ಹಾಕಿದ ಮೇಲೆ ಈ ರೀತಿಯಾಗಿಲ್ಲ, ೧೯೭೫-೭೬ರಲ್ಲೇ ಈ ರೀತಿ ಆಗಿರುವುದು,

Distripution of Sites to SSs in Byadagi Towa

985 SRI M. M. MALAGI (Byadagi).—Will the Minister for Housing and Urban Development be pleased to state —

(a) the number of siteless persons recognised in Byadagi town.

(b) out of them. the number of persons belonging to Scheduled Castes ;

(c) whether the sites have been give in all the above stated siteless persone ;

(d) if not, the reasons for the same ?

SRI DHARAM SINGH (Minister for Housing and Urban Development).—

(a) 922,

(b) 86.

(c) The following 168 sites only have been distributed.

(1)	to the persons belonging to Scheduled Castes	31
(2)	to other persons	137
		168